
# ಅಧಿಕ ರಕ್ತಸ್ರಾವವೇ? ಡಿ ಅಂಡ್ ಸಿ ಮಾಡಿಸಿಕೊಳ್ಳಿ!

**ಮಹಿಳೆಯರಲ್ಲಿ ಮೆನಾರ್ಕೆಯಿಂದ ಹಿಡಿದು ಮೆನೊಪಾಸ್‌ವರೆಗೆ ಗರ್ಭಕೋಶದ ತೊಂದರೆ ಇದ್ದರೆ ಹಲವು ಕಾರಣಗಳಿಗೆ ತೀವ್ರ ರಕ್ತಸ್ರಾವ ಉಂಟಾಗಬಹುದು. ಹೀಗೆ ಅಸಹಜ ರಕ್ತಸ್ರಾವ ಆದರೆ ತಕ್ಷಣ ತಜ್ಞ ವೈದ್ಯರನ್ನು ಕಾಣಬೇಕು. ಗರ್ಭಕೋಶದ ಒಳಪದರವನ್ನು ಕೆರೆದು ತೆಗೆದು ಪರೀಕ್ಷೆ ಮಾಡುವ ವಿಧಾನ ಡಿ ಅಂಡ್ ಸಿ ಆಗಿದ್ದು, ಗರ್ಭಾಶಯದ ಒಳಭಾಗದಲ್ಲಿ ಆಗಿರುವ ತೊಂದರೆಯನ್ನು ಇದು ನಿಖರವಾಗಿ ಪತ್ತೆ ಹಚ್ಚುತ್ತದೆ.**

**■ ಡಾ. ವೀಣಾ ಭಟ್, ಭದ್ರಾವತಿ**




‘ನನ್ನ ಮಗಳಿಗೆ ಮದುವೆಯಾಗಿ ಏಳು ವರ್ಷ ಆದ್ರೂ ಮಕ್ಕಳಾಗಿಲ್ಲ. ಎಲ್ಲಾ ಕಡೆ ಔಷಧ ತಗೊಂಡ್ರೂ ನೀರೇ ನಿಲ್ತಾ ಇಲ್ಲ. ಡಿ ಅಂಡ್ ಸಿ ಏನಾದ್ರು ಮಾಡ್ತೀರಾ? ತುಂಬಾ ಜನ ಇದನ್ನು ಮಾಡಿದರೆ ನೀರು ನಿಲ್ಲುತ್ತೆ ಅಂತಾರಲ್ಲ ಡಾಕ್ಟ್ರೇ?’ ಎಂಬುದು ಶಾಂತಮ್ಮನ ಪ್ರಶ್ನೆ. ‘ಒಂದು ಮಗು ಆದ ಮೇಲೆ ವರ್ಷದೊಳಗೆ ಗರ್ಭ ನಿಂತಿತ್ತು, ನಮ್ಮ ಯಜಮಾನರು ಇಷ್ಟುಬೇಗ ಮಗು ಬೇಡ ಅಂತಾ ಡಿ ಅಂಡ್ ಸಿ ಮಾಡಿಸಿಬಿಟ್ರು, ಈಗ ಮತ್ತೆ 5 ವರ್ಷ ಆದ್ರೂ ನೀರು ನಿಲ್ತಾನೇ ಇಲ್ಲ’ ಎಂಬುದು ಕುಸುಮಾಳ ಅಳಲು.

25 ವರ್ಷದ ಸುಮಾಳಿಗೆ 6 ತಿಂಗಳ ಮಗುವಿಗೆ ಎದೆಹಾಲುಣಿಸುವಾಗಲೇ ಮತ್ತೆ ಗರ್ಭ ನಿಂತುಬಿಟ್ಟಿತ್ತು. ಅವಳೇ ಅಬಾರ್ಷನ್‌ಗೆ ಔಷಧದಂಗಡಿಯಿಂದ ಮಾತ್ರೆ ತೆಗೆದುಕೊಂಡು ನುಂಗಿ, ಅತಿಯಾದ ರಕ್ತಸ್ರಾವವಾಗಿ ಆಸ್ಪತ್ರೆಗೆ ಹೋದಾಗ ವೈದ್ಯರು ತಕ್ಷಣವೇ ಡಿ ಅಂಡ್ ಸಿ ಮಾಡಿದಾಗ ರಕ್ತಸ್ರಾವ ನಿಂತಿತು. ಹೀಗೆ ಮಗು ಬೇಕೆನ್ನುವವರು/ಬೇಡವೆನ್ನುವವರು ಮೆನಾರ್ಕೆಯಿಂದ ಮೆನೊಪಾಸ್‌ವರೆಗಿನ ಮಹಿಳೆಯರೆಲ್ಲರಲ್ಲೂ, ಕೆಲವೊಮ್ಮೆ ಮುಟ್ಟು ನಿಂತ ಮಹಿಳೆಯರಲ್ಲೂ ರಕ್ತಸ್ರಾವವಾದಾಗ ಅಂತಹವರಿಗೂ ವೈದ್ಯರು ಡಿ ಅಂಡ್ ಸಿ ಮಾಡುತ್ತಾರೆ.

### ಏನಿದು ಡಿ ಅಂಡ್ ಸಿ?

ಡಿ ಅಂಡ್ ಸಿ ಎಂಬುದೊಂದು ಚಿಕಿತ್ಸೆಯೇ ಅಥವಾ ರೋಗ ಪತ್ತೆಹಚ್ಚುವ ವಿಧಾನವೇ? ಬೇಡದ ಗರ್ಭ ಕಳೆದುಕೊಳ್ಳುವ ಪರಿಯೇ? ಹೀಗೆ ಹಲವು ಸಂದೇಹಗಳು ಮಹಿಳೆಯರಿಗೆ ಮೂಡುತ್ತಲೇ ಇರುತ್ತದೆ. ಸ್ತ್ರೀ ಹಾಗೂ ಪ್ರಸೂತಿ ವಿಭಾಗದಲ್ಲಿ ಡಿ ಅಂಡ್ ಸಿ ಎಂದರೆ ಡೈಲಟೇಶನ್ ಮತ್ತು ಕ್ಯೂರೆಟಾಜ್ ಎಂದರ್ಥ.

ಗರ್ಭಕೊರಳ(ಸರ್ವಿಕ್ಸ್)ನ್ನು ಡೈಲಟೇಶನ್ ಅಥವಾ ಅಗಲಗೊಳಿಸುವಿಕೆ ಮತ್ತು ಕ್ಯೂರೆಟ್ ಎನ್ನುವ ಉಪಕರಣವನ್ನು ಗರ್ಭಾಶಯದೊಳಗೆ ತೂರಿಸಿ ಒಳಪದರವನ್ನು ಕೆರೆದು ತೆಗೆಯುವ ಪ್ರಕ್ರಿಯೆಯೇ ಡಿ ಅಂಡ್ ಸಿ. ಇದಕ್ಕೂ ಮುನ್ನ ಗರ್ಭಕೋಶದ ರಚನೆ ಹಾಗೂ ಹಾರ್ಮೋನುಗಳಿಂದ ಗರ್ಭಕೋಶದ ಒಳಪದರದೊಳಗಾಗುವ ಬದಲಾವಣೆಗಳ ಬಗ್ಗೆ ತಿಳಿದಿರಬೇಕು.

ಪ್ರತಿಹೆಣ್ಣಿನಲ್ಲೂ ಮೆನಾರ್ಕೆಯಿಂದ ಮೆನೋಪಾಸ್‌ವರೆಗೆ 22 ರಿಂದ 35 ದಿನಕ್ಕೊಮ್ಮೆ ಮಾಸಿಕ ಋತುಚಕ್ರ ಉಂಟಾಗುತ್ತದೆ. ಇದಕ್ಕೆ ಕಾರಣ ಮೆದುಳಿನ ಹೈಪೋಥಲಾಮಸ್ ಹಾಗೂ ಪಿಟ್ಯೂಟರಿ ಗ್ರಂಥಿಯಿಂದ ಬರುವ ಹಾರ್ಮೋನುಗಳಿಂದ ಪ್ರಚೋದಿತವಾಗಿ ಅಂಡಾಶಯದಲ್ಲಿ ಉಂಟಾಗುವ ಕಾರ್ಯಚಟುವಟಿಕೆಯಿಂದ ಋತುಚಕ್ರ